MVC No.140/2024

PW-1

**ದಿನಾಂಕಃ 25-11-2025.**

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟಿ ಸವಾಲು: 2 ನೇ ಎದುರುದಾರ ಪರ ಶ್ರೀ SVP ಮಾನ್ಯ ವಕೀಲರಿಂದಃ**

ನನಗೆ ಅಪಘಾತವಾಗುವ ಸಂದರ್ಭದಲ್ಲಿ sales manager ಎಂದು Hindustan field Pvt. Ltd ಕೆಲಸ ಮಾಡುತ್ತಿದ್ದು ಅದು ನನ್ನ ತಾತ್ಕಾಲಿಕ ಕೆಲಸವಾಗಿರುತ್ತದೆ ಎಂದರೆ ಸರಿ. ನಾನು ಸದರಿ ಕೆಲಸವನ್ನು ಶೋರಾಪೂರದಲ್ಲಿ ಮಾಡುತ್ತೇನೆ. ಸಾಕ್ಷಿಗೆ ಈಗ ನಿಮ್ಮ ನಿಪಿ.12 ರಿಂದ 14 ರಲ್ಲಿ ನಿಮ್ಮ location ನ್ನು ಬಾಗೇವಾಡಿ ಎಂದು ತೋರಿಸಲಾಗಿರುತ್ತದೆ ಎಂದು ಹೇಳಿದ್ದಕ್ಕೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ನಿಪಿ.12 ರಿಂದ 14 ನಾನು ಬಾಗೇವಾಡಿಯಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿದ್ದವು ಎಂದರೆ ಸರಿ.

2. ಸದರಿ ಅಪಘಾತವಾದ ತಕ್ಷಣವೇ ನನ್ನನ್ನು ಚಿಕಿತ್ಸೆಗಾಗಿ ಶಹಾಪೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿರುತ್ತದೆ. ನಂತರ ನಾನು ಕಲಬುರಿಗಿಯ United Hospital ಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ನಾನು ಸದರಿ ಎರಡು ಆಸ್ಪತ್ರೆಗಳಲ್ಲಿ ಮಾತ್ರ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಸದರಿ ಅಪಘಾತವಾದ ದಿನದಂದು ನಾನು ಓಡಿಸುತ್ತಿದ್ದ ಮೋಟಾರ ಸೈಕಲಗೆ DL ನ್ನು ಹೊಂದಿದ್ದು ಅದನ್ನು ನಾನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ನನ್ನ ಹತ್ತಿರ DL ಇಲ್ಲದೇ ಇದ್ದರೂ ಕೂಡಾ ಇರುತ್ತದೆ ಎಂದು ಹಾಗೂ ಅದನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸದರಿ ಮೋಟಾರ ಸೈಕಲ ಓಡಿಸಲು ಬರದ ಕಾರಣ ನಾನೇ ಸದರಿ ಲಾರಿಗೆ ಡಿಕ್ಕಿ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪಘಾತವು ನನ್ನ ತಪ್ಪಿನಿಂದ ಆಗಿದ್ದರೂ ಕುಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತವು ಸದರಿ ಲಾರಿ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಅಪಘಾತದ ದಿನವೇ ನಾನು ಶಹಾಪೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಪೋಲಿಸರು ಬಂದಾಗ ದೂರನ್ನು ಸಲ್ಲಿಸಿರುತ್ತೇನೆ. ನಾನು ಅಪಘಾತವಾದ ಒಂದು ವಾರದ ನಂತರ ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಸದರಿ ದಿನದಂದು ಸದರಿ ವೈದ್ಯರಿಗೆ ದೂರಿನ್ನು ಸಲ್ಲಿಸಬೇಕೆಂದು ಹೇಳಿರುತ್ತೇನೆ. ಸದರಿ ಶಹಾಪೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಪೋಲಿಸರು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಸದರಿ ಅಪಘಾತವು ನನ್ನ ತಪ್ಪಿನಿಂದ ಆಗಿದ್ದರಿಂದ MLC ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಶಹಾಪೂರಿನ ಸರ್ಕಾರಿ ಆಸ್ಪತ್ರೆಯಲ್ಲಿ 1 ಗಂಟೆ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ ಹಾಗೂ United Hospital ಕಲಬುರಿಗಿಯಲ್ಲಿ 15 ದಿನಗಳವರೆಗೆ ಒಳರೋಗಿಯಾಗಿ ದಾಖಲಾಗಿರುತ್ತೇನೆ. ನಾನು ಅಪಘಾತವಾದ ದಿನದಿಂದಲೇ 15 ದಿವಸಗಳವರೆಗೆ ಸದರಿ United Hospital ನಲ್ಲಿ ಒಳರೋಗಿಯಾಗಿ ದಾಖಲಾಗಿರುತ್ತೇನೆ ಎಂದರೆ ಸರಿ. ನಾನು ದಿಃ 02-11-2023 ರಿಂದ 15 ದಿನಗಳವರೆಗೆ ಸದರಿ United Hospital ದಲ್ಲಿ ಒಳರೋಗಿಯಾಗಿ ದಾಖಲಾಗಿದ್ದೆ ಎಂದರೆ ಸರಿ. ನಾನು ಸದರಿ 15 ದಿನಗಳನ್ನು ಹೊರತುಪಡಿಸಿ ಮತ್ತೆ ಸದರಿ united hospital ಯಲ್ಲಿ ಯಾವತ್ತಿಗೂ ಒಳರೋಗಿಯಾಗಿ ದಾಖಲಾಗಿರುವುದಿಲ್ಲ. ಸದರಿ United Hospital ನಲ್ಲಿ ನಾನು ಶಸ್ತ ಚಿಕಿತ್ಸೆಗೆ ಒಳಪಟ್ಟಿರುತ್ತೇನೆ. ನಿಪಿ.9 ರಿಂದ 11 ನನಗೆ ಅಪಘಾತವಾಗಿರುವುದಕ್ಕೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ.9 ರಿಂದ 11 ನ್ನು ಸೃಷ್ಟಿ ಮಾಡಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ.10 ರಂತೆ ಮೆಡಿಕಲ ಬಿಲ್ಲುಗಳನ್ನು ಸೃಷ್ಟಿ ಮಾಡಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

4. ನಾನು ನನ್ನ ಕಂಪನಿಗೆ ಸದರಿ ಬಿಲ್ಲುಗಳ reimbursement ಬಗ್ಗೆ ಕೇಳಿರುವುದಿಲ್ಲ. ನನಗೆ ಸದರಿ ಅಪಘಾತದಲ್ಲಿ ಯಾವುದೇ ಗಾಯಗಳು ಆಗಿರುವುದಿಲ್ಲ ಹಾಗೂ ನಾನು ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದರಿಂದ ನನ್ನ ಸದರಿ ಕಂಪನಿಗೆ ಸದರಿ reimbursement ನ್ನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ 15 ದಿನಗಳವರೆಗೆ ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಇದ್ದಾಗ sick leave ನ್ನು ಪಡೆದಿದ್ದರ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಸದರಿ ಆಸ್ಪತ್ರೆಯಲ್ಲಿ ದಾಖಲಾಗದ ಕಾರಣ ಯಾವುದೇ sick leave ನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ 15 ದಿನಗಳವರೆಗೆ ಆಸ್ಪತ್ರೆಯಲ್ಲಿದ್ದಾಗ ನನ್ನ ಸಂಬಳದಲ್ಲಿ ಹಾಗೂ ನನ್ನ ಬಡ್ತಿಯಲ್ಲಿ

ಯಾವುದೇ ವ್ಯತ್ಯಾಸ ಆಗಿರುವುದಿಲ್ಲ. ನನಗೆ ಮೋಟಾರ ಸೈಕಲ ಈಗ ಸರಿಯಾಗಿ ಓಡಿಸಲು ಆಗದ ಕಾರಣ ನಾನು ಸದರಿ ಕಂಪನಿಯಿಂದ ಕೆಲಸ ಬಿಟ್ಟಿರುತ್ತೇನೆ. ನಾನು ಸದರಿ ಕೆಲಸದಿಂದ ನಿವೃತ್ತಿಯನ್ನು ಹೊಂದಿರುತ್ತೇನೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಾನು ನನ್ನ ಅರ್ಜಿಯಲ್ಲಿ ಸದರಿ ನೌಕರಿಯಿಂದ ನಿವೃತ್ತಿಯನ್ನು ಪಡೆದುಕೊಂಡಿರುತ್ತೇನೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ.

ಅಪಘಾತವಾದ ಸಂದರ್ಭದಲ್ಲಿ ನನಗೆ 28 ವರ್ಷ ವಯಸ್ಸು ಇದ್ದು ನಾನು ನನ್ನ ಸದರಿ ಕೆಲಸದಿಂದ ಪ್ರತಿ ತಿಂಗಳು ರೂ.20,000/- ಆದಾಯವನ್ನು ಹೊಂದಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ರಸ್ತೆ ಅಪಘಾತವಾಗದೇ ಇದ್ದರೂ ಕುಡಾ ಹೆಚ್ಚಿನ ಪರಿಹಾರ ಹಣವನ್ನು ಪಡೆಲು ಪೊಲೀಸರೊಂದಿಗೆ ಶಾಮಿಲಾಗಿ ಸುಳ್ಳಾದ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿ ಅದರ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
**ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.**